ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :	1957
ಸದಸ್ಯರ ಹೆಸರು :	ಶ್ರೀ ನಸೀರ್ ಅಹ್ಮದ್ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ :	23-03-2021
ಉತ್ತರಿಸುವವರು :	ಪೌರಾಡಳಿತ ಮತ್ತು ಸಕ್ಕರೆ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
(ಅ)	ನಗರ ಮತ್ತು ಪಟ್ಟಣಗಳನ್ನು ಸ್ವಚ್ಛವಾಗಿಡಲು ಶ್ರಮಿಸುತ್ತಿರುವ ಪೌರಕಾರ್ಮಿಕರ ಸೇವಾ ಭದ್ರತೆ, ವೇತನ ಹಾಗೂ ವಸತಿ ಒದಗಿಸುವ ಬಗ್ಗೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ?	ಪೌರಕಾರ್ಮಿಕರ ಸೇವಾ ಭದ್ರತೆ, ವೇತನ ಹಾಗೂ ಅವರಿಗೆ ವಸತಿ ಒದಗಿಸುವ ವಿಚಾರದಲ್ಲಿ ಸರ್ಕಾರದ ಹಂತದಲ್ಲಿ ತೆಗೆದುಕೊಂಡಿರುವ ಕ್ರಮಗಳು ಕೆಳಕಂಡಂತಿದೆ. **<u>ಸೇವಾ ಭದ್ರತೆ ಹಾಗೂ ವೇತನ :</u>** ಖಾಯಂ ಪೌರಸೇವಾ ನೌಕರರಿಗೆ ನೀಡುವಂತಹ ಎಲ್ಲಾ ಸೇವಾ ಸವಲತ್ತುಗಳನ್ನು ಖಾಯಂ ಪೌರಕಾರ್ಮಿಕರಿಗೂ ನೀಡಲಾಗುತ್ತಿದೆ, ಪೌರಕಾರ್ಮಿಕರಿಗೆ 21 ದಿನಗಳ ವಿಶೇಷ ಭತ್ಯೆ ಹಾಗೂ ಸರ್ಕಾರದ ಆದೇಶ ಸಂಖ್ಯೆ: 126 ಟಿಎಂಎಸ್ 2016 ದಿನಾಂಕ: 04.12.2017ರಲ್ಲಿ ಪೌರಕಾರ್ಮಿಕರನ್ನು ಒಂದು ಬಾರಿಗೆ ವಿಶೇಷ ನೇಮಕಾತಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ: ನಅಇ 126 ಟಿಎಂಎಸ್ 2016, ದಿನಾಂಕ: 7.8.2017 ರಲ್ಲಿ ನಗರ ಸ್ಥಳೀಯ ಸಂಸ್ಥೆಗಳಲ್ಲಿ 700 ಜನಸಂಖ್ಯೆಗೆ ಒಬ್ಬ ಪೌರಕಾರ್ಮಿಕರಂತೆ ನಿಗದಿಪಡಿಸಲಾಗಿದ್ದು, ಹೊರಗುತ್ತಿಗೆ ನೀಡುವುದನ್ನು ಸ್ಥಗಿತಗೊಳಿಸಿ ಸ್ಥಳೀಯ ಸಂಸ್ಥೆಗಳಿಂದ ನೇರವಾಗಿ ಸಂಭಾವನೆಯನ್ನು ನೀಡಲು ಆದೇಶಿಸಲಾಗಿರುತ್ತದೆ. ಖಾಯಂ ಪೌರಸೇವಾ ನೌಕರರಿಗೆ ಸರ್ಕಾರದ ಆದೇಶಾನುಸಾರ ಕಾಲಕಾಲಕ್ಕನುಗುಣವಾಗಿ ಹಾಗೂ ವೇತನ ಆಯೋಗದ ಆದೇಶದಂತೆ ಬದಲಾಗುವ ವೇತನದಂತೆಯೇ ಖಾಯಂ ಪೌರಕಾರ್ಮಿಕರಿಗೂ ಸಹ ವೇತನ ಪಾವತಿಸಲಾಗುತ್ತಿದೆ. ಹಾಗೂ ನೇರ ಪಾವತಿ (ಹೊರಗುತ್ತಿಗೆ) ಹಾಗೂ ಗುತ್ತಿಗೆ ಪೌರಕಾರ್ಮಿಕರಿಗೆ ಕಾರ್ಮಿಕ ಇಲಾಖೆಯು ನಿಗದಿಪಡಿಸಿರುವ ಕನಿಷ್ಟ ವೇತನದ ಪ್ರಕಾರ ನಗರಸಭೆ ಗ್ರೇಡ್-1 ರೂ.15343/-ನಗರಸಭೆ ಗ್ರೇಡ್-2 ರೂ.14953/-, ಪುರಸಭೆ ಮತ್ತು ಪಟ್ಟಣ ಪಂಚಾಯಿತಿ ರೂ.14563/-ವೇತನ ನೀಡಲಾಗುತ್ತಿದ್ದು. ESI & PF ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ.

		<u>ಪೌರಕಾರ್ಮಿಕರ ವಸತಿ ಯೋಜನೆ:</u> ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ಅನೈರ್ಮಲ್ಯ ವಾತಾವರಣದಲ್ಲಿ ಸ್ವಚ್ಛತಾ ಕಾರ್ಯ ನಿರ್ವಹಿಸುತ್ತಿರುವ ವಸತಿ ರಹಿತ ಖಾಯಂ ಪೌರಕಾರ್ಮಿಕರು, ಲೋಡರ್ಸ್, ಯು.ಜಿ.ಡಿ ಹೆಲ್ಪರ್ಸ್ ಹಾಗೂ ಕ್ಲೀನರ್ಸ್ ಗಳಿಗೆ ವಸತಿ ಸೌಲಭ್ಯ ಕಲ್ಪಿಸುವ ಉದ್ದೇಶದಿಂದ "ಪೌರಕಾರ್ಮಿಕರ ಗೃಹಭಾಗ್ಯ ಯೋಜನೆ" ಯನ್ನು 2014-15 ರಿಂದ ಜಾರಿಗೊಳಿಸಲಾಗಿರುತ್ತದೆ. ಅರ್ಹ ಫಲಾನುಭವಿಗಳು ಸ್ವಂತ ನಿವೇಶನ ಹೊಂದಿದ್ದಲ್ಲಿ ಬಿ.ಎಲ್.ಸಿ ಮಾದರಿಯಡಿ ಅಥವಾ ನಿವೇಶನ ರಹಿತರಿಗೆ ನಗರ ಸ್ಥಳೀಯ ಸಂಸ್ಥೆಯ ಜಾಗದಲ್ಲಿ ವಸತಿ ಸಮುಚ್ಚಯ ಎ.ಎಚ್.ಪಿ ಮಾದರಿಯಡಿ ವಸತಿ ಸೌಲಭ್ಯ ಕಲ್ಪಿಸಲಾಗುತ್ತಿದೆ. ಪ್ರತಿ ಘಟಕಕ್ಕೆ ವೆಚ್ಚ ರೂ.7.50 ಲಕ್ಷಗಳಿದ್ದು, ಇದರಲ್ಲಿ ರಾಜ್ಯದ ಸಹಾಯ ಧನ ರೂ.6.00 ಲಕ್ಷಗಳು ಮತ್ತು ಕೇಂದ್ರ ಸರ್ಕಾರದ PMAY ಯೋಜನೆಯಿಂದ/ ಬ್ಯಾಂಕ್ ಸಾಲ/ ಫಲಾನುಭವಿಗಳಿಂದ ರೂ.1.50 ಲಕ್ಷಗಳನ್ನು ಭರಿಸಲಾಗುತ್ತಿದೆ. ಈ ಯೋಜನೆಯಡಿ ಈವರೆಗೆ 4918 ಫಲಾನುಭವಿಗಳನ್ನು (2929 – ಎ.ಎಚ್.ಪಿ ಮತ್ತು 1989 – ಬಿ.ಎಲ್.ಸಿ) ಆಯ್ಕೆ ಮಾಡಲಾಗಿರುತ್ತದೆ.

ಸಂಖ್ಯೆ: ನಅಇ 54 ಜಿಇಎಲ್ 2021

(ಎನ್.ನಾಗರಾಜು, ಎಂ.ಟಿ.ಬಿ)
ಪೌರಾಡಳಿತ ಮತ್ತು ಸಕ್ಕರೆ ಸಚಿವರು